Web Site: WWW.cescmysore.org CIN: U40109KA2004SGC035177

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತ ವಿಳಾಸ: ನಂ 29, ಸೆಸ್ಕ್, ನಿಗಮ ಕಛೇರಿ ಗ್ರೌಂಡ್ ಫ್ಲೋರ್ ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ ವಿಜಯನಗರ 2ನೇ ಹಂತ ಮೈಸೂರು-570017

ಫೋನ್: 08174-233607
Email: aeecescask@gmail.com

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ರವರ ಕಛೇರಿ, ಕಾ ಮತ್ತು ಪಾ ಉಪ-ವಿಭಾಗ, ಮೊದಲಿಯಾರ್ ರಸ್ತೆ, ಅರಸೀಕೆರೆ-573103.

ಸಂಖ್ಯೆ: ಸ.ಕಾ.ಇಂ(ವಿ)/ಎ.ಇ.ಟಿ./ಅಕೆರೆ/2017-18/1687 (a) ದಿನಾಂಕ: 06.08.17

ಲಗತ್ತು :-

## // ಜನ ಸಂಪರ್ಕ ಸಭೆ //

ವಿಷಯ : ಅರಸೀಕೆರೆ ಉಪವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ಕುರಿತ ಸಭಾ ನಡಾವಳಗಳು.

ಅರಸೀಕೆರೆ ಉಪವಿಭಾಗದಲ್ಲಿ ದಿನಾಂಕ : 29.08.17 ರಂದು ಬೆಳಗ್ಗೆ 11 :00 ಗಂಟೆಯಲ್ಲಿ ಮಾನ್ಯ ಶ್ರೀ ಅಧೀಕ್ಷಕ ಇಂಜಿನಿಯರ್(ವಿ), ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಹಾಗೂ ಶಾಖಾಧಿಕಾರಿಗಳ ಸಮ್ಮುಖದಲ್ಲಿ ಸಾರ್ವಜನಿಕರ ಜೊತೆ ಕುಂದು ಕೊರತೆಗಳ ಬಗ್ಗೆ ಚರ್ಚಿಸಿದ ವಿವರ.

ಶ್ರೀ ದೇವರಾಜು ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳನ್ನು, ಶಾಖಾಧಿಕಾರಿಗಳನ್ನು ಮತ್ತು ಸುಮಾರು 25 ಜನ ಗ್ರಾಹಕರನ್ನು ಸ್ವಾಗತಿಸಿ, ಕುಂದುಕೊರತೆಗಳನ್ನು ತಿಳಿಸಲು ಉದ್ದೇಶಿಸಿ ಮಾತನಾಡಿದರು.

| ಕ್ರ.ಸಂ | ಸಡಾವಳಿಯ ಸೂಚನೆಗಳು | ತೆಗೆದುಕೊಂಡ ಕ್ರಮ |
|---|---|---|
| 1 | ಬಸವರಾಜು-ಬಿಸಲೇಹಳ್ಳಿರವರು F10 ಚಿಕ್ಕೂರು ಫೀಡರ್‌ನಲ್ಲಿ ವೋಲ್ಟೇಜ್ ಕಡಿಮೆ ಎಂದು ಮನವಿ ಮಾಡಿದರು.- 8197479590 | F10 ಚಿಕ್ಕೂರು ಫೀಡರ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಾಗಿ ಶಿಥಿಲಗೊಂಡಿರುವ ಕಂಬ ಮತ್ತು ತಮತಿಗಳನ್ನು ಬದಲಾಯಿಸಲು ಕಾಮಗಾರಿ ಮಂಜೂರಾಗಿದ್ದು ಪ್ರೇಮ ಎಲೆಕ್ಟ್ರೀಕಲ್ಸ್ ಗುತ್ತಿಗೆದಾರರಿಗೆ ಕಾಮಗಾರಿಗಾಗಿ DW ಆಗಿರುತ್ತದೆ. ಹಾಗೂ Link line ಗಾಗಿ ಅಂದಾಜು ಪಟ್ಟಿ ಮಂಜೂರಾಗಿದ್ದು ಕಾಮಗಾರಿಗಾಗಿ ಟೆಂಡರ್ ಕರೆಯುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. |
| 2 | ಮಂಜುನಾಥ-ಕೆಂಪುಸಾಗರ ರವರ KMP-23244, 44HP ಲೋಡ್ ಇದೆ. ನಮಗೆ ವೋಲ್ಟೇಜ್ ಸಮಸ್ಯೆ ತುಂಬಾ ಇದೆ ಎಂದು ತಮ್ಮ ಮನವಿ ಸಲ್ಲಿಸಿದರು.-9844423435 | ಮಂಜುನಾಥ-ಕೆಂಪುಸಾಗರ ರವರ KMP-23244 ಸ್ಥಾವರವು ಪರಿಶೀಲಿಸಿದ್ದು, ವೋಲ್ಟೇಜ್ ಸಮಸ್ಯೆ ಇರುವುದಿಲ್ಲ. ಆದರೆ ಗರಾಹಕರು ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸರಬರಾಜು ಕೋರಿರುತ್ತಾರೆ. ನಿರಂತರ ಜ್ಯೋತಿ ಯೋಜನೆಯ ವಿದ್ಯುತ್ ಸರಬರಾಜಿಗಾಗಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |
| 3 | ಪರಮೇಶ್ವರಚಾರ್ ಜೇನುಕಲ್ ನಗರ ಅರಸೀಕೆರೆ ರವರ ಮನೆಯ ಮೇಲೆ 11 ಕೆ.ವಿ.ಲೈನ್ ಇದೆ, ನಮ್ಮ ಮನೆಗೆ ವಿದ್ಯುತ್ ಸಂಪರ್ಕ ನೀಡುತ್ತಿಲ್ಲವೆಂದು ಅರ್ಜಿ ಸಲ್ಲಿಸಿರುತ್ತಾರೆ.- 9535684835 | ಮನೆಯ ಮೇಲೆ 11 ಕೆ.ವಿ. ಲೈನನ್ನು ಸ್ಥಳಾಂತರಿಸಲು ಪರಮೇಶ್ವರಚಾರ್ ಜೇನುಕಲ್ ನಗರ ಅರಸೀಕೆರೆ ರವರಿಗೆ ಸ್ವಯಂ ಕಾರ್ಯ ಯೋಜನೆಯಡಿ ಅರ್ಜಿ ಸಲ್ಲಿಸಲು ಸೂಚಿಸಲಾಗಿದ್ದು, ಹಾಗೂ ಸ್ಥಳಿಯ ನಗರಸಭೆಯಿಂದ ವತಿಯಿಂದ 11 ಕೆ.ವಿ. ಮಾರ್ಗವನ್ನು ಸ್ಥಳಾಂತರಿಸಲು ವೆಚ್ಚವನ್ನು ನಗರ ಸಭೆಯಿಂದ ಭರಿಸಲು ಮನವಿಯನ್ನು ಸಲ್ಲಿಸಲಾಗುವುದು. |

| | | |
|---|---|---|
| 4 | ಮೋಹನ್ ಕುಮಾರ್ ಪ್ರೆಸ್ ರಿಪೋರ್ಟರ್ ಮಾರುತಿನಗರ ರವರು TP-1237 ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿದ್ದು, ಅದನ್ನು ಶಾಶ್ವತ ವಿದ್ಯುತ್ ನಿಲುಗಡೆಗೊಳಿಸಲು ಅರ್ಜಿಯನ್ನು ನೀಡಿದ್ದು, ACC ಹಣವನ್ನು ಹೊಂದಾಣಿಕೆ ಮಾಡಲು ಕೋರಿ ಅರ್ಜಿಯನ್ನು ನೀಡದ್ದು, ಅದರೆ ಹೊಂದಾಣಿಕೆ ಮಾಡದೆ, ಕೇವಲ ರೂ.800 ಹಣಕ್ಕೆ ವಿದ್ಯುತ್ ನಿಲುಗಡೆ ಮಾಡುತ್ತಾರೆ ಎಂದು ತಮ್ಮ ಮನವಿ ನೀಡಿದ್ದಾರೆ.-9844089410 | ಮೋಹನ್ ಕುಮಾರ್ ಪ್ರೆಸ್ ರಿಪೋರ್ಟರ್ ಮಾರುತಿನಗರ ರವರ ACC ಹಣವನ್ನು ಹೊಂದಾಣಿಕೆ ಮಾಡಲು ನೀಡಿರುವ ಅರ್ಜಿಯ ಅನುಸಾರ ನಿಗಮದ ನಿಯಮಾನುಸಾರ ಕ್ರಮಕೈಗೊಂಡು, ಸಮಸ್ಯೆಯನ್ನು ಬಗೆಹರಿಸಲಾಗುವುದು. |
| 5 | ಸೈಯದ್ ಶಿವಾಲಯ ಬಡಾವಣೆ ಹಿಂಭಾಗ ಮನೆ ಮೇಲೆ ಲೈನ್ ಹೋಗಿದೆ, ಆ ಲೈನ್ ಮನೆಗೆ touch ಆಗುತ್ತೆ, ಆ ಲೈನನ್ನು ತೆಗೆಯಲು ಏನಾದರೂ ವ್ಯವಸ್ಥೆ ಮಾಡಿ ಎಂದು ತಮ್ಮ ಮನವಿಯನ್ನು ನೀಡಿದ್ದಾರೆ. -9538900121 | ಸೈಯದ್ ಸಾದಿಕ್‌ರವರಿಗೆ ಸ್ವಯಂ ಕಾರ್ಯ ಯೋಜನೆಯಡಿಯಲ್ಲಿ ನಿಗಮದ ನಿಯಮಾನುಸಾರ ವಿದ್ಯುತ್ ಗುತ್ತಿಗೆದಾರರ ಮುಖಾಂತರ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಿಕೊಳ್ಳಲು ಸೂಚಿಸಲಾಯಿತು. |
| 6 | ವಸಂತ್ ರಾಜ್ ಸಂತೇ ಮೈದಾನ ರವರು ತಮ್ಮ ಆರ್.ಆರ್.ಸಂಖ್ಯೆ L-22635 | L-22635 ಮಾಪಕದ ರೀಡಿಂಗ್ ಪರಿಶೀಲಿಸಿ ವಿದ್ಯುತ್ ಬಿಲ್ಲನ್ನು ಪುನರ್ಪರಿಶೀಲಿತ ವಿದ್ಯುತ್ ಬಿಲ್ಲನ್ನು ನೀಡಲು ಕ್ರಮಕಕ್ಕೈಗೊಳ್ಳಲಾಗುವುದು. |
| 7 | ಗುತ್ತಿಗೆದಾರರಾದ ವಿಜಯ್ ರವರು RAPDRP System ಕೆಲಸಗಳು ತುಂಬಾ ನಿಧಾನವಾಗುತ್ತಿದೆ, ಎಂದು ಮನವಿಯನ್ನು ಸಲ್ಲಿಸಿದರು. | RAPDRP System ತಾಂತ್ರಿಕ ದೋಷಗಳನ್ನು ನಿವಾರಿಸಲು ಕ್ರಮಕೈಗೊಳ್ಳಲಾಗಿದೆ. |

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಸೆಸ್ಕ್ ಉಪವಿಭಾಗ ಅರಸೀಕೆರೆ.

ಪ್ರತಿಗಳು:

1) ಕಾರ್ಯಪಾಲಕ ಇಂಜಿನಿಯರ್(ವಿ) ವಿಭಾಗ ಕಚೇರಿ ಸೆಸ್ಕ್., ಅರಸೀಕೆರೆ ರವರ ಆದ್ಯ ಅವಗಾಹನೆಗಾಗಿ.
2) ಲೆಕ್ಕಾಧಿಕಾರಿ ಸೆಸ್ಕ್., ವಿಭಾಗ ಕಛೇರಿ ಅರಸೀಕೆರೆರವರ ಮಾಹಿತಿಗಾಗಿ
3) ಎಲ್ಲಾ ಶಾಖಾಧಿಕಾರಿಗಳು(ವಿ) ಮಾರುತಿ ನಗರ/ಅರಸೀಕೆರೆ/ಬೆಳಗುಂಬ/ಹಾರನಹಳ್ಳಿ/ರವರ ಮಾಹಿತಿಗಾಗಿ.
4) ಹಿರಿಯ ಸಹಾಯಕರು ಸೆಸ್ಕ್., ಕಂದಾಯ ಶಾಖೆ ಉಪವಿಭಾಗ ಅರಸೀಕೆರೆ.
5) ಮುಖ್ಯ ಕಡತಕ್ಕೆ.